## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

## ಸಿ ಮಿಸ್ 85/2020

**ಪಿಡಬ್ಲೂ-1**

ಸಾಕ್ಷಿದಾರರ ಹೆಸರು - ಧಮಯಂತಿ @ ದಿವ್ಯ ಕೆ ಎಸ್
ಗಂಡನ ಹೆಸರು - ಕೃಷ್ಣಮೂರ್ತಿ
ವಯಸ್ಸು - 27 ವರ್ಷ
ವಾಸ - ಕೆ ಆರ್ ನಗರ

ದಿನಾಂಕ 16.06.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ- ಶ್ರೀ ಜೆ ಜಿ ವಕೀಲರಿಂದ

ಎದುರುದಾರರು ನನ್ನ ಗಂಡ ದಿಃ 06-08-2012 ರಂದು ನಮ್ಮಿಬ್ಬರ ಮದುವೆ ಶ್ರೀ ಸಾಯಿ ಭವನದಲ್ಲಿ ನಡೆಯಿತು. ಮದುವೆ ಸಂದಂರ್ಭದಲ್ಲಿ ಎದುರುದಾರರಿಗೆ 30 ಸಾವಿರ ನಗದು ಹಣದ, 30 ಗ್ರಾಂ ,ನ್ನವನ್ನು ವರಿದಕ್ಷಿಣೆಗಾಗಿ ನೀಡಿದೆವು. ನನ್ನ ಪೋಷಕರು 4 ರಿಂದ 5 ಲಕ್ಷ ಹಣ ಖರ್ಚು ಮಾಡಿ ನನ್ನ ಮದುವೆ ಮಾಡಿದರು. ಕೆ ಆರ್ ನಗರದಲ್ಲಿರುವ ನನ್ನ ತಂದೆ ಮನೆಯಲ್ಲಿ ಮದುವೆ ನಂತರ ನಾವಿಬ್ಬರೂ 1 ವರ್ಷಗಳ ಕಾಲ ಸಂಸಾರ ನಡೆಸಿದೆವು. ಎದುರುದಾರರು ಆಗಾಗ ಸಣ್ಣಪುಟ್ಟ ಜಗಳ ಮಾಡಿ ನನಗೆ ಹೊಡೆದು ಬಡೆದು ಅವಾಚ್ಯ ಶಬ್ದಗಳಿಂದ ಬೈದು ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಪಿಡಿಸುತ್ತಿದ್ದರು. ಎದುರುದಾರರು ಇದುವರೆಗೂ ನನಗೆ ಊಟಕ್ಕಾಗಲೀ, ಜೀವನಾಂಶ ನೀಡಿಲ್ಲ.

2. ಎದುರುದಾರರು ಒಮ್ಮೆ ಅವರ ಊರಿಗೆ ಕರೆದುಕೊಂಡು ಹೋಗಿ ಸೀಮಂತ ಮಾಡಲು ಒಪ್ಪದೇ ತದನಂತರ ಗ್ರಾಮಸ್ಥರು ಪಂಚಾಯಿತಿ ಮೇರೆಗೆ ನನಗೆ ಸೀಮಂತ ಮಾಡಿ ಕಳುಹಿಸಿದರು. ನನ್ನ ತಂದೆ ಮನೆಯಲ್ಲಿ ಇರಲು ಆಗುವುದಿಲ್ಲ ಎಂದು ಕೆ ಆರ್ ನಗರದಲ್ಲಿ ಬಾಡಿಗೆ ಮನೆಮಾಡಿಕೊಂಡೆವು ಅಲ್ಲಿ ನನಗೆ ಅವರು ಹೊಡೆದು ಬಡೆದು ಮಾಡುತ್ತಿದ್ದರು. ಬಾಡಿಗೆ ಮನೆಯಲ್ಲಿ 1 ತಿಂಗಳು ಮಾತ್ರ ನಾವು ಜೊತೆಯಲ್ಲಿದ್ದೆವು. ನನಗೆ ಎಂಟೂವರೆ ವರ್ಷದ ಒಬ್ಬಳು ಮಗಳು ಇದ್ದಾಳೆ. ಆಕೆಯ ಶಿಕ್ಷಣ ಕೊಡಿಸಲು ತುಂಬಾ ಕಷ್ಟವಾಗುತ್ತಿದೆ.

3. ಎದುರುದಾರರು ಕೆ ಆರ್ ಎಸ್ ರಸ್ತೆ ಮೈಸೂರಿನಲ್ಲಿರುವ ವಿನಸ್ ಕಂಪನಿಯಲ್ಲಿ ಸುಮಾರು 20 ವರ್ಷಗಳಿಂದ ಕೆಲಸ ಮಾಡುತ್ತಿದ್ದು ಅವರ ಮಾಸಿಕ ಸಂಬಳ 20 ರಿಂದ 25 ಸಾವಿರ ಇದೆ. ಎದುರುದಾರರ ತಂದೆ ಹೆಸರಿನಲ್ಲಿ ಸುಮಾರು ಒಂದೂವರೆ ಎಕರೆ ಜಮೀನಿದ್ದು,

ಎದುರುದಾರರು ಹಾಗೂ ಅವರ ತಂದೆ ಒಟ್ಟು ಕುಟುಂಬದಲ್ಲಿದ್ದು ಹೊಗೆ ಸೊಪ್ಪು ಬೆಳೆಯುತ್ತಿದ್ದು, ಸುಮಾರು 5 ರಿಂದ 6 ಲಕ್ಷ ವಾರ್ಷಿಕ ಆದಾಯ ಇದೆ. ಎದುರುದಾರರಿಗೆ ನಮ್ಮನ್ನು ಸಾಕುವ ಸಾಮರ್ಥ್ಯವಿದ್ದು ನನಗೂ ಹಾಗೂ ನನ್ನ ಮಗಳಿಗೂ 15 ಸಾವಿರ ಜೀವನಾಂಶ ಕೊಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ನನ್ನ ಅರ್ಜಿಗೆ ಸಂಬಂಧಿಸಿದಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| ದಾಖಲಾತಿಗಳು | ನಿಶಾನೆಗಳು |
|---|---|
| ನನ್ನ ಹಾಗೂ ಎದುರದಾರರ ವಿವಾಹ ಆಮಂತ್ರ ಣ ಪತ್ರಿಕೆ | ನಿಪಿ 1 |
| ಸರ್ವೆ ನಂ.37/8 ದ 38/3, 37/11 ಮತ್ತು 37/2 ರ ಗಣಕೀಕೃತ ಪಹಣಿಗಳು | ನಿಪಿ 2 ರಿಂದ 5 |

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸ ಇದೆ ಎಂ

(ಪವಿತ್ರ ಆರ್)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರದನ್ಯಾದಂ., ಕೆ.ಆರ್.ನಗರ